ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಅವರು ಶೂನ್ಯ ವೇಳೆಯಲ್ಲಿ 20 ಜನರು ಎತ್ತಿದಂಥ ಪ್ರಶ್ನೆಗಳಿಗೆ 20 ನಿಮಿಷದಲ್ಲಿ ಉತ್ತರವನ್ನು ಕೊಟ್ಟದ್ದಾರೆ ಅದು ಎಷ್ಟರಮಟ್ಟಿಗೆ ಪರಿಹಾರವಾಗುತ್ತಿವೆ ಎಂಬುದನ್ನು ನೋಡಬೇಕು.

ಶ್ರೀ ಜಿ.ವಿ. ಶ್ರೀರಾಮರೆಡ್ಡಿ : ಸನ್ಮಾನ್ಯ ಅಧ್ಯಕ್ಷರೆ, ಹೀಗಾಗಿ ಕೋಲಾರ ಜಿಲ್ಲೆಯಲ್ಲಿ ಇದೊಂದು ವ್ಯಾಪಕವಾದ ಸಮಸ್ಯೆಯಾಗಿದೆ. ಚಿಕ್ಕಬಳ್ಳಾಪುರ ಉಪವಿಭಾಗದಲ್ಲಂತೂ ಬಹಳ ಗಂಭೀರವಾದಂತಹ ಪರಿಸ್ಥಿತಿ. ಕೋಲಾರ ಉಪವಿಭಾಗದ ರಾಯಲ್‌ಪಾಡ್ ರಸ್ತೆಯಲ್ಲಿ ಐದಾರು ಕೊಲೆಗಳನ್ನು ಮಾಡಿದ್ದಾರೆ. ಆದರೆ ಇದುವರೆವಿಗೂ ಕೂಡ ಪೋಲಿಸಿನವರು ಯಾರನ್ನು ಹಿಡಿದಿಲ್ಲ, ಕೇಸ್ ದಾಖಲು ಮಾಡಿದ್ದಾರೆಯೇ ಹೊರತು ಯಾರನ್ನೂ ಪತ್ತೆ ಹಚ್ಚಿಲ್ಲ. ಅಲ್ಲಿ ಶಿಕ್ಷಕರನ್ನು ಕೊಲೆ ಮಾಡಿದ್ದಾರೆ, ದಂಪತಿಗಳ ಮೇಲೆ ಹಲ್ಲೆ ಮಾಡಿದ್ದಾರೆ. ಏನು ಇದರ ಬಗ್ಗೆ ವರದಿ ತರಿಸಿದ್ದೀರಿ, ಇದಕ್ಕೆ ಕಾರಣ ಏನು ಎಂದು ಹುಡುಕಿದ್ದೀರಿ ಸರ್ಕಾರ ದಯವಿಟ್ಟು ಅದನ್ನು ಹೇಳಬೇಕು. ಇದು ಬಹಳ ವ್ಯಾಪಕವಾಗಿ ನಡೆಯುತ್ತಿದೆ. ಸಂಜೆ ಏಳು ಗಂಟೆಯ ನಂತರ ಯಾರು ದ್ವಿಚಕ್ರ ವಾಹನದಲ್ಲಿ ಓಡಾಡಲಿಕ್ಕೆ ಆಗದಂಥ ಪರಿಸ್ಥಿತಿ ಇದೆ. ಅಡ್ಡಗಟ್ಟಿ ಕೊಲೆ ಮಾಡುತ್ತಾರೆ, 10 ರೂಪಾಯಿಯನ್ನು ದೋಚಿ ಕೊಂಡು ಹೋಗುತ್ತಾರೆ. ಚಿಕ್ಕಬಳ್ಳಾಪುರ ಉಪವಿಭಾಗದ ಪೋಲೀಸರಂತೂ ಸಂಪೂರ್ಣ ನಿಷ್ಕ್ರಿಯರಾಗಿದ್ದಾರೆ. ಏನು ಕೆಲಸ ಮಾಡುತ್ತಾ ಇಲ್ಲ. ಸರ್ಕಾರ ಇದರ ಬಗ್ಗೆ ಸೂಕ್ತ ಮಾಹಿತಿಯನ್ನು ಕೊಡಬೇಕು. ಮತ್ತು ಸಂಜೆ ವೇಳೆಯಲ್ಲಿ ಓಡಾಡುವ ಜನರಿಗೆ ಯಾವ ರೀತಿಯ ಭದ್ರತೆಯನ್ನು ಸರ್ಕಾರ ಕೊಡುತ್ತದೆಂದು ಹೇಳಬೇಕು.

ಶ್ರೀ ಆರ್. ರೋಷನ್ ಬೇಗ್ : ಸನ್ಮಾನ್ಯ ಅಧ್ಯಕ್ಷರೆ, ಕೋಲಾರ ಜಿಲ್ಲೆಯಲ್ಲಿ ಅದರಲ್ಲೂ ವಿಶೇಷವಾಗಿ ಚಿಕ್ಕಬಳ್ಳಾಪುರ ಉಪವಿಭಾಗದಲ್ಲಿ ನಡೆದಿರತಕ್ಕಂಥ ಘಟನೆಗಳು ಸರ್ಕಾರದ ಗಮನಕ್ಕೆ ಬಂದಿವೆ. ನಿನ್ನೆ ಡಿ.ಜಿ.ಪಿ. ಶ್ರೀನಿವಾಸುಲುರವರು ಹೋಗಿ ಅಲ್ಲಿ ಸುತ್ತಮುತ್ತಲಿನ ಸ್ಟಾರ್ ನೋಡಿಕೊಂಡು ಅಲ್ಲಿನ ಅಧಿಕಾರಿಗಳೊಂದಿಗೆ ಮೀಟಿಂಗ್ ಮಾಡಿಕೊಂಡು ಬಂದಿದ್ದಾರೆ. ಬರೀ ಚಿಕ್ಕಬಳ್ಳಾಪುರ ಒಂದೇ ಅಲ್ಲದೆ ಶ್ರೀನಿವಾಸಪುರ, ಕೋಲಾರದ ಹೈವೇಗಳಿಗೆ ಒಂದು ಜಿಗ್‌ಜಾಗ್ ಪೆಟ್ರೋಲಿಂಗ್ ಮಾಡಬೇಕೆಂದು ಅಲ್ಲಿಗೆ 18 ಜೀಪ್‌ಗಳನ್ನು ಕಳುಹಿಸಿದ್ದೇವೆ. ಡಿ.ಸಿ.ಪಿ. ಕೂಡ ಭೇಟಿ ನೀಡಿ ಬಂದಿದ್ದಾರೆ. ಕೆಲವು ವೈಟಲ್ ಕ್ಲ್ಯೂ ಸಿಕ್ಕಿದೆ ಅದರ ಆಧಾರದ ಮೇಲೆ ತನಿಖೆ ನಡೆಯುತ್ತಿದೆ.

ಅಧ್ಯಕ್ಷರು : ಶ್ರೀನಿವಾಸಪುರದಲ್ಲಿ ಇನ್ಸ್‌ಪೆಕ್ಟರ್‌ಗಳಿಗೆ, ಸಬ್-ಇನ್ಸ್‌ಪೆಕ್ಟರ್‌ಗಳಿಗೆ ಜೀಪ್ಸ್ ಕೊಟ್ಟಿಲ್ಲ, ಕೊಟ್ಟಿರುವ ಜೀಪ್‌ಗಳು ಹೋಗತಕ್ಕ ಸ್ಥಿತಿಯಲ್ಲಿ ಇಲ್ಲ. ಆದುದರಿಂದ ಅವರಿಗೆ ತಕ್ಷಣ ಹೊಸ ಜೀಪ್ಗಳ ವ್ಯವಸ್ಥೆಯನ್ನು ಮಾಡಿ.

ರ) ಸಂತೆಮಾರನಹಳ್ಳಿ ವಿಧಾನ ಸಭಾ ಕ್ಷೇತ್ರದಲ್ಲಿ 12.5 ಎಂ.ವಿ. ಟ್ರಾನ್ಸ್ ಫಾರ್ಮರ್ ಅಳವಡಿಸುವುದು.

ಶ್ರೀ ಎ.ಆರ್. ಕೃಷ್ಣಮೂರ್ತಿ (ಕಡೂರು) : ಸನ್ಮಾನ್ಯ ಅಧ್ಯಕ್ಷರೆ, ಇಂದಿನ ಮುಖ್ಯಮಂತ್ರಿಗಳು, ಉಪಮುಖ್ಯಮಂತ್ರಿಗಳಾಗಿದ್ದಾಗ ನಮ್ಮ ಕ್ಷೇತ್ರದಲ್ಲಿನ ವಿದ್ಯುತ್ ಸಮಸ್ಯೆಯನ್ನು ಪರಿಹಾರ ಮಾಡಲಿಕ್ಕೆ ನಮ್ಮ ಕ್ಷೇತ್ರದಲ್ಲಿ 66.11 ಕೆ.ವಿ.ಯ ಉಪಕೇಂದ್ರವನ್ನು ಪ್ರಾರಂಭಿಸಬೇಕೆಂದು ಈ ಸದನದಲ್ಲಿ ನಾನು 1986 ರಲ್ಲೇ ಕೇಳಿಕೊಂಡಿದ್ದೆ, ಅದಕ್ಕೆ ಆಂದಿನ ಉಪ ಮುಖ್ಯಮಂತ್ರಿಗಳು ಲಿಖಿತ ಮೂಲಕ ಉತ್ತರವನ್ನು ಸಹ ಕೊಟ್ಟಿದ್ದರು, 1996ರ ಡಿಸೆಂಬರ್‌ಗೆ ಪೂರ್ಣಗೊಳಿಸುತ್ತೇವೆ ಎಂದು ಹೇಳಿದ್ದರು. ಆದರೆ ಅದು ಇದುವರೆವಿಗೂ ಪೂರ್ಣಗೊಂಡಿಲ್ಲ. ಇವತ್ತು ಉಪಕೇಂದ್ರವನ್ನು ಪೂರ್ಣಗೊಳಿಸುವ ಹಂತದಲ್ಲಿ, ಚಾರ್ಜ್ ಮಾಡುವ ಹಂತದಲ್ಲಿ ಟ್ರಾನ್ಸ್‌ಫಾರ್ಮರ್ ಹೆಚ್ಚು ಕಡಿಮೆ ಸಿಡಿದು ಹೋಗಿದೆ. From tech-

nical point of view, ಇವತ್ತು ನಾವು 66.11 ಕೆ.ವಿಯ ಉಪ ಕೆಂದ್ರಕ್ಕೆ 12.5 ಎಂ.ವಿ.ಯನ್ನು ಅಳವಡಿಸಬೇಕಾಗಿತ್ತು. ಆದರೆ ಅವರು 6.3 ಎಂ.ವಿಯನ್ನು ಟ್ರಾನ್ಸ್‌ಫಾರ್ಮರ್ ಅಳವಡಿಸಿ ವಿದ್ಯುತ್ತಿನ ಸಮಸ್ಯೆಯನ್ನು ನಿವಾರಿಸುವ ಬದಲು ಇನ್ನು ಹೆಚ್ಚು ಮಾಡಿದ್ದಾರೆ. ಆದುದರಿಂದ technical point of view 66.11 ಕೆ.ವಿ.ಯ ಉಪಕೇಂದ್ರಕ್ಕೆ 12.5 ಎಂ.ವಿಯ ಟ್ರಾನ್ಸ್‌ಫಾರ್ಮರ್ ಅನ್ನು ಅಳವಡಿಸಿ ನಮ್ಮ ಕ್ಷೇತ್ರದಲ್ಲಿರುವ ವಿದ್ಯುತ್ ಸಮಸ್ಯೆಯನ್ನು ಪರಿಹರಿಸಬೇಕೆಂದು ತಮ್ಮ ಮೂಲಕ ಘನ ಸರ್ಕಾರವನ್ನು ನಾನು ಕೇಳಿಕೊಳ್ಳುತ್ತೇನೆ.

ಶ್ರೀ ಶರಣಬಸಪ್ಪ ದರ್ಶನಾಪುರ (ಇಂಧನ ರಾಜ್ಯ ಸಚಿವರು) :- ಮಾನ್ಯ ಸದಸ್ಯರು ಈಗಾಗಲೇ ಇದರ ಬಗ್ಗೆ ತಿಳಿಸಿದ್ದಾರೆ. ಇದರ ಬಗ್ಗೆ ನಿನ್ನೆ ಚೀಫ್ ಇಂಜಿನಿಯರ್, ಜನರಲ್ ಅವರಿಗೆ ಹೇಳಿದ್ದೇನೆ, ಅವರು ಈ ದಿನ ಸಮಸ್ತ ವರದಿಗಳನ್ನು ತರುತ್ತೇವೆ ಎಂದು ಹೇಳಿದ್ದಾರೆ, ಮಾನ್ಯ ಸದಸ್ಯರ ಜೊತೆ ಕೂತು ಇದರ ಬಗ್ಗೆ ವರದಿ ಬಂದ ಮೇಲೆ ಚರ್ಚೆ ಮಾಡುತ್ತೇನೆ.

Mr. Speaker : Hon'ble Minister Mr. Mohiddin, are you ready with the Mysore Paper Mills matter? You had promised the other day.

Sri. B.A. Mohiddin (Hon'ble Minister for Industries): After the calling attention matter, Sir.

6) ಗಮನ ಸೆಳೆಯುವ ಸೂಚನೆಗಳು

ಅ) ಬಿಜಾಪುರದಲ್ಲಿನ ಕೈಗಾರಿಕಾ ಅಭಿವೃದ್ಧಿ ಪ್ರದೇಶಗಳಲ್ಲಿ ನೀರಿನ ಹಾಗೂ ವಿದ್ಯುತ್ ಅಭಾವದ ಬಗ್ಗೆ.

ಶ್ರೀ ಶಿವಾನಂದ ಎಸ್. ಪಾಟೀಲ್ (ತಿಕೋಟಾ) : ಬಿಜಾಪುರದ ಕೈಗಾರಿಕ ಅಭಿವೃದ್ಧಿ ಕ್ಷೇತ್ರದಲ್ಲಿರುವ ಕೈಗಾರಿಕೆಗಳು ನೀರಿನ ಮತ್ತು ವಿದ್ಯುತ್ತಿನ ಅಭಾವದಿಂದ ಮುಚ್ಚತಕ್ಕ ಸ್ಥಿತಿಗೆ ಬಂದಿವೆ. ಆದರ ಬಗ್ಗೆ ನಾನು ಕೈಗಾರಿಕೆ ಮಂತ್ರಿಗಳ ಗಮನವನ್ನು ಸೆಳೆಯುತ್ತೇನೆ.

★ ಶ್ರೀ ಬಿ. ಎ. ಮೋಹಿದ್ದಿನ್ (ಕೈಗಾರಿಕೆ ಸಚಿವರು): ಸನ್ಮಾನ್ಯ ಅಧ್ಯಕ್ಷರೆ, ಬಿಜಾಪುರ ನಗರದ ಸಮೀಪ 218 ಎಕರೆ ಪ್ರದೇಶವನ್ನು ಸ್ವಾಧೀನಪಡಿಸಿಕೊಂಡು ಮಹಾಲ್ ಬಾಗಾಯತ್ ಕೈಗಾರಿಕಾ ಪ್ರದೇಶವನ್ನು ಅಭಿವೃದ್ಧಿಗೊಳಿಸಲಾಗಿದೆ. ಸದರಿ ಕೈಗಾರಿಕಾ ಪ್ರದೇಶದಲ್ಲಿ 11 ಕೊಳವೆ ಬಾವಿಗಳನ್ನು ಕೊರೆಯಲಾಗಿದ್ದು, 5 ಕೊಳವೆ ಬಾವಿಗಳು ಕಾರ್ಯರೂಪದಲ್ಲಿರುತ್ತವೆ. ಎರಡು ಕೊಳವೆ ಬಾವಿಗಳ ಪಂಪ್‌ಗಳು ರಿಪೇರಿಯಲ್ಲಿದ್ದು, ಉಳಿದ 4 ಕೊಳವೆ ಬಾವಿಗಳಿಗೆ ವಿದ್ಯುತ್ ಸಂಪರ್ಕ ಒದಗಿಸಿ ಕಾರ್ಯರೂಪಕ್ಕೆ ತರಬೇಕಾಗಿದೆ. ಕೈಗಾರಿಕಾ ಪ್ರದೇಶದಲ್ಲಿ ಸ್ಥಾಪಿತವಾಗಿರುವ ಕೈಗಾರಿಕಾ ಘಟಕಗಳಿಗೆ ನೀರು ಸರಬರಾಜು ಮಾಡಲು ಶ್ರದ್ಧಾಪೂರ್ವಕವಾಗಿ ಪ್ರಯತ್ನಿಸಲಾಗಿದೆ. ಆದರೆ ಸದರಿ ಕೈಗಾರಿಕಾ ಪ್ರದೇಶದಲ್ಲಿ ಅಂತರ್‌ಜಲ ಸಮೃದ್ಧಿಯೂ ಪ್ರೋತ್ಸಾಹಕವಾಗಿ ಇಲ್ಲದಿರುವುದರಿಂದ ಪರ್ಯಾಯವಾಗಿ ಅಡೆತಡೆ ಇಲ್ಲದೆಯೇ ಕೈಗಾರಿಕೆಗಳಿಗೆ ನೀರು ಸರಬರಾಜು ಮಾಡಲು ಕರ್ನಾಟಕ ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿ (ಕ.ನ. ನೀ.ಸ. ಮತ್ತು ಒ.ಚ.ಮಂ) ಯವರನ್ನು ಕೃಷ್ಣಾ ನದಿಯಿಂದ ಮಹಾಲ್ ಬಾಗಾಯತ್ ಕೈಗಾರಿಕಾ ಪ್ರದೇಶಕ್ಕೆ ದಿನಂಪ್ರತಿ 0.50 ಮಿಲಿಯ ಗ್ಯಾಲನ್ ನೀರನ್ನು ಒದಗಿಸಲು ಕೋರಲಾಗಿದೆ.